## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ಯವರ ನ್ಯಾಯಾಲಯ
## ರಾಣೆಬೆನ್ನೂರು

**ಸಿ.ಸಿ.710/2024**

ಪಿರ್ಯಾಧಿ : ಅಬಕಾರಿ ಉಪ ನಿರೀಕ್ಷಕರು
ರಾಣೆಬೆನ್ನೂರು ವಿಭಾಗ.

**ವಿರುದ್ಧ**

ಆರೋಪಿ : ಕರಕಪ್ಪ ತಂದೆ ಸಿದ್ದಪ್ಪ ಪೂಜಾರ
ವಯಾಃ 72 ವರ್ಷ, ಸಾಃ ಬೆನಕನಕೊಂಡ
ತಾಃ ರಾಣೆಬೆನ್ನೂರು,
ಜಿಃ ಹಾವೇರಿ.

**ದೋಷಾರೋಪಣೆ**

ನಾನು ಶ್ರೀಮತಿ ಮೇಘಶ್ರೀ, ಬಿ.ಕಾಂ. ಎಲ್. ಎಲ್. ಬಿ.,ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು 2 ನೇ ಹೆಚ್ಚುವರಿ ಜೆ.ಎಂ.ಎಫ್.ಸಿ ಯವರ ನ್ಯಾಯಾಲಯ, ರಾಣೆಬೆನ್ನೂರು ನಿಮ್ಮ ಮೇಲೆ ಹೊರಸುವ ದೋಷಾರೋಪಣೆ ಎನೇಂದರೆಃ

ದಿನಾಂಕ 20-04-2024 ರಂದು ಲೋಕಸಭಾ ಚುನಾವಣೆ 2024 ರ ಮಾದರಿ ನೀತಿ ಸಂಹಿತೆ ಜಾರಿ ಇರುವ ಸಂದರ್ಭದಲ್ಲಿ ಬೆಳಿಗ್ಗೆ 11-30 ಗಂಟೆಯ ಸುಮಾರಿಗೆ ರಾಣೇಬೆನ್ನೂರಿನ ಬೆನಕನಕೊಂಡ ರಸ್ತೆಯಲ್ಲಿ ರಾಷ್ಟ್ರೀಯ ಹೆದ್ದಾರಿ 48 ಅಂಡರ್ ಬ್ರಿಡ್ಜ್ ಕೆಳಗೆ ಬೆನಕನಗೊಂಡ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿ ಅಬಕಾರಿ ಗಸ್ತು ಮಾಡುತ್ತಿರುವ ಸಮಯದಲ್ಲಿ ಆರೋಪಿತರಾದ ನೀವು ಹಿರೋ ಸ್ಟಂಡರ್ ದ್ವಿಚಕ್ರ ವಾಹನ ಸಂಖ್ಯೆ ಕೆಎ-35/ಇಕೆ-5812 ರಲ್ಲಿ ಪೆಟ್ರೋಲ್ ಟ್ಯಾಂಕ್ ಮೇಲೆ 90 ಮಿಲಿಯ 24 ಮದ್ಯದ ಟೆಟ್ರಾ ಪ್ಯಾಕೇಟುಗಳು, ಒಟ್ಟು 48 ಮದ್ಯದ ಟೆಟ್ರಾಪ್ಯಾಕೇಟುಗಳನ್ನು ಅಕ್ರಮವಾಗಿ ಮಾರಟ ಮಾಡುವ ಉದ್ದೇಶದಿಂದ ಯಾವುದೇ ಪರವಾನಗೆ ಇಲ್ಲದೆ ಸಾಗಾಟ ಮಾಡುತ್ತಿದ್ದಾಗ ಸಿಕ್ಕಿ ಬಿದ್ದಿದ್ದು, ಆ ಮೂಲಕ ಕರ್ನಾಟಕ ಅಬಕಾರಿ ಕಾಯಿದೆ ಕಲಂ. 32(1) ಹಾಗೂ

38(ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಮಾಡಿದ್ದೀರಾ ಎಂದು ನಿಮ್ಮ ಮೇಲೆ ಆರೋಪ ಇದೆ.

ಪ್ರಶ್ನೆ 1: ಈ ಮೇಲೆ ಓದಿ ಹೇಳಿದ ಆರೋಪಣೆ ನಿಮಗೆ ತಿಳಿಯಿತೇ ಅಥವಾ ಅರ್ಥವಾಯಿತೇ ?

ಉತ್ತರ : **ಅರ್ಥವಾಯಿತು .**

ಪ್ರಶ್ನೆ 2: ನೀವು ಈ ಅಪರಾಧವನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೇ?

ಉತ್ತರ : **ವಿಚಾರಣೆಯಾಗಬೇಕಿದೆ.**

(ಮೇಲಿನಂತೆ ಆರೋಪಣೆ ಓದಿ ಹೇಳಿ ಆರೋಪಿಯು ನೀಡಿದ ಉತ್ತರವನ್ನು ನಮೂದು ಮಾಡಿ ಮೇಲ್ಕಂಡ ಆರೋಪಗಳಿಗೆ ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿರುವುದರಿಂದ ವಿಚಾರಣೆಯನ್ನು ನಡೆಯಬೇಕೆಂದು ಈ ಮೂಲಕ ನಿರ್ದೇಶಿಸಲಾಗಿದೆ)

ದಿನಾಂಕಃ 18-03-2025

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ರಾಣೆಬೆನ್ನೂರು

**ಆರೋಪಿಯ ಸಹಿ**